ಸಾಕ್ಷಿಯನ್ನು ದಿನಾಂಕ 17-02-2021 ರಂದು ಪುನಹ ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಸ್ ಎನ್ ವಕೀಲರಿಂದ ಪ್ರತಿವಾದಿ 5 ರವರ ಪರ

ದಾವಾಸ್ತಿಯ ಆರ್ ಟಿ ಸಿ ಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ದಾವಾಸ್ತಿಯು ನರಸಿಂಹ ದೇವರು ಹೆಸರಿನಲ್ಲಿ ಇರುತ್ತದೆ. ಆರ್ ಟಿ ಸಿ ಯು ವಾದಿಯ ಹೆಸರಿನಲ್ಲಿ ಇಲ್ಲ ಎಂದರೆ ನರಸಿಂಹ ದೇವರು ಮಠದ ಆರಾಧ್ಯ ದೇವರಾಗಿದ್ದು ಅವರ ಸುಪರ್ದಿನಲ್ಲಿಯೇ ಇರುತ್ತದೆ. ದಾವಾಸ್ತಿಯು ವಾದಿಗೆ ಸೇರಿದ್ದು ಎಂದು ತೋರಿಸಲು ಅಡಂಗಲ್ಲಿನಲ್ಲಿ ನಮೂದು ಇರುತ್ತದೆ ಅದನ್ನು ಹೊರತು ಪಡಿಸಿ ಬೇರೆ ದಾಖಲೆಗಳು ಇರುವುದಿಲ್ಲ. ನಾವು ಹಾಜರು ಪಡಿಸಿರುವ ಆರ್ ಟಿ ಸಿ ಯಲ್ಲಿರುವ ಆಸ್ತಿಯು ವಾದಿಯ ಹಕ್ಕಿಗೆ ಸಂಬಂಧಪಟ್ಟಿದ್ದಲ್ಲ ಎಂದರೆ ಸರಿಯಲ್ಲ. ವಾದಿಗೆ ದಾವಾಸ್ತಿಯಲ್ಲಿ ಹಕ್ಕು ದಾಖಲೆ ಪತ್ರಗಳು ಯಾವುದೂ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಯು ಆನಾದಿಕಾಲದಿಂದಲೂ ವಾದಿಯರ ಸ್ವಾಧಿನದಲ್ಲಿದೆ ಎಂದು ನಿರ್ದಿಷ್ಟವಾಗಿ ಯಾವ ವರ್ಷದಲ್ಲಿ ಯಾರಿಂದ ಪಡೆದಿದ್ದರು ಎಂದು ಹೇಳಲು ಆಗುವುದಿಲ್ಲ. ನರಸಿಂಹ ದೇವರ ಎಲ್ಲಾ ಆಸ್ತಿಯು ನಮಗೆ ಸೇರಿದ್ದು ಅಲ್ಲ. ದಾವಾಸ್ತಿಯು ವಾದಿಯರ ಹಕ್ಕಿಗೆ ಸೇರಿದ್ದು ಎಂದು ತೋರಿಸುವ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಮಠದ ವ್ಯವಹಾರ ನನಗೆ 18 ವರ್ಷಗಳಿಂದ ತಿಳಿದಿರುತ್ತದೆ. ಈ ದಾವಾ ಆಸ್ತಿಯ ಬಗ್ಗೆ ವಾದಿಯು ಈ ಮುಂಚೆ ಒಂದು ದಾವೆ ಹೂಡಿದ್ದರು ಎಂದರೆ ನನಗೆ ಮಾಹಿತಿ ಇಲ್ಲ. ಆ ದಾವೆ ಏನು ಆಗಿರುತ್ತದೆ ಹಾಗೂ ಅದನ್ನು ಯಾರು ಪ್ರತಿನಿಧಿಸುತ್ತಿದ್ದರು ಎಂದು ನನಗೆ ಮಾಹಿತಿ ಇಲ್ಲ. ನಿಪಿ-26 ರ ಹಿಂದಿನ ವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಒ ಎಸ್ ನಂ. 83/2012 ರ ದಾವೆ ಏನು ಆಗಿದೆ ಎಂದು ನನಗೆ ನೆನಪಿಲ್ಲ ದಾಖಲೆ ನೋಡಿ ಹೇಳಬೇಕಾಗುತ್ತದೆ. ಆ ದಾವೆ ವಜಾ ಆಗಿರುವುದಿಲ್ಲ. ಸಾಕ್ಷಿಯು ಈಗ ಒ ಎಸ್ 83/2012 ರ ವಾದ ಪತ್ರವನ್ನು ನೋಡಿ ವಾದಿಯು ಹೂಡಿದ ದಾವೆ ಆಗಿರುತ್ತದೆ ಎಂದರೆ ಸರಿ ಎಂದು ನುಡಿಯುತ್ತಾರೆ. ಷದ್ರಿ ದಾವೆ 29.01.2016 ಕ್ಕೆ ವಜಾ ಆಗಿರುತ್ತದೆ ಎಂದರೆ ನಾನು ದಾಖಲೆ ನೋಡಿ ಹೇಳಬೇಕಾಗುತ್ತದೆ.

ಮುಂದುವರಿದ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.

ತೆ.ನ್ಯಾ.ಸಾ.ಹೇ.ನನ್ನ.ಉ.ಬೆ. ಮಾಡಲಾಯಿತು.

ಓ.ಹೇ.ಕೇ.ಸ ಇದೆ ಎಂದು ಒಪ್ಪಿರುತ್ತಾರೆ.

ಸಿವಿಲ್ ನ್ಯಾಯಾಧೀಶರು, ಸುಳ್ಯ.